

# ಇಳಿಗಾಲದ ನೋವು

ವಾರದ ಹಿಂದೆ 'ಜಾಕಿ ಚಾನ್ ನಿಧನ' ಎಂಬ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಮಿಂಚಿನಂತೆ ಹರಿದಾಡಿತ್ತು. ಸುದ್ದಿ ತಿಳಿದು ಶೋಕಕ್ಕೀಡಾದ ಲಕ್ಷಾಂತರ ಅಭಿಮಾನಿಗಳು ಎಲ್ಲೆಡೆ ಸಂತಾಪ ಸೂಚಿಸಿದ್ದರು. ಫೇಸ್‌ಬುಕ್‌ನಲ್ಲಿ ಸುಮಾರು 10 ಲಕ್ಷ ಅಭಿಮಾನಿಗಳು ಸಂತಾಪ ವ್ಯಕ್ತಪಡಿಸಿದ್ದು ದೊಡ್ಡ ಸುದ್ದಿಯಾಯಿತು. 60ರ ಹರೆಯದ ಜಾಕಿ ಚಾನ್ (ಬರ್ತ್‌ಡೇ 7/4/1954) ಮಾತ್ರ ಮರುದಿನ ತಮ್ಮ ಎಂದಿನ ಮುಗುಳ್ನಗೆಯೊಂದಿಗೆ ತಣ್ಣನೆ ಪ್ರತಿಕ್ರಿಯೆ ನೀಡಿ, 'ನಾನು ಸತ್ತರೆ ಖಂಡಿತಾ ನಿಮಗೆ ತಿಳಿಸುತ್ತೇನೆ' ಎಂದು ತನ್ನ ವೆಬ್‌ಸೈಟ್‌ನಲ್ಲಿ ಬರೆದುಕೊಂಡಿದ್ದ!

ಈಗ ಮತ್ತೊಂದು ಸುದ್ದಿ ಬಂದಿದೆ. ಅಮಲು ಪದಾರ್ಥ ಸೇವಿಸಿದ ಮತ್ತು ತನ್ನ ಅಪಾರ್ಟ್‌ಮೆಂಟ್‌ನಲ್ಲಿ ಗೆಳೆಯನಿಗೂ ಅಮಲು ಪದಾರ್ಥ ಸೇವಿಸಲು ಅನುಕೂಲ ಮಾಡಿಕೊಟ್ಟ ಆರೋಪದ ಮೇಲೆ ಜಾಕಿ ಚಾನ್‌ನ ಮಗ ಜೇಸೀ ಚಾನ್ ವಿರುದ್ಧ ಪೊಲೀಸರು ಕೇಸ್ ದಾಖಲಿಸಿದ್ದಾರೆ. ಜೇಸೀ ಗಾಯಕ ಮತ್ತು ನಟ. ಹಲವು ಸಿನಿಮಾಗಳಲ್ಲಿ ನಟಿಸಿದ್ದು, ಈಗಾಗಲೆ ಮೂರು ಆಲ್ಬಂಗಳೂ ಹೊರಬಂದಿವೆ. ಈ ಆರೋಪ ಸಾಬೀತಾದರೆ ಜೇಸೀ ಚಾನ್‌ಗೆ 3 ವರ್ಷ ಕಠಿಣ ಶಿಕ್ಷೆ ಆಗಲಿದೆ. ಚೀನಾದ ಸರ್ಕಾರ ಈ ವರ್ಷ ಮಾದಕದ್ರವ್ಯ ಜಾಲದ ವಿರುದ್ಧ ಕಠಿಣ ಕ್ರಮ ಪ್ರಕಟಿಸಿದ್ದು, ಬೀಜಿಂಗ್ ನಗರವೊಂದರಲ್ಲೇ 7000ಕ್ಕೂ ಹೆಚ್ಚು ಅಮಲುಕೋರರನ್ನು ಬಂಧಿಸಿದೆ. ಅದರಲ್ಲಿ ಜಾಕಿ ಚಾನ್ ಮಗ ಮತ್ತು ಆತನ ಸಹನಟ ಗೆಳೆಯನೂ ಸೇರಿದ್ದಾರೆ.

2009ರಲ್ಲಿ ಚೀನಾ ಸರ್ಕಾರದ 'ಮಾದಕದ್ರವ್ಯ ಸೇವನೆ ವಿರುದ್ಧದ ರಾಯಭಾರಿ' ಆಗಿ ಜಾಕಿ ಚಾನ್ ನೇಮಕಗೊಂಡಿದ್ದ. ಈಗ ಆತನ ಮಗನೇ ಮಾರಿಜುವಾನಾ ಸೇವಿಸಿ ಸಿಕ್ಕಿ ಬಿದ್ದಿದ್ದಾನೆ. ಇಳಿಗಾಲದಲ್ಲಿ ಆಗಿರುವ ಈ ನೋವು ಮರೆಯುವುದು ಕಷ್ಟ. ಮಗನ ಬಂಧನವಾದಾಗ, ಜಾಕಿ ಚಾನ್ ದುಃಖದಿಂದ ಕಣ್ಣೀರಿಟ್ಟಿದ್ದ. ತನ್ನ ವೆಬ್‌ಸೈಟ್‌ನಲ್ಲಿ 'ನನಗೆ ಇವತ್ತು ದುಃಖ ಮತ್ತು ಆಘಾತ ಎರಡೂ ಆಗಿದೆ. ಸಾರ್ವಜನಿಕ ವ್ಯಕ್ತಿಯಾಗಿ ನಾಚಿಕೆ ಆಗುತ್ತಿದೆ. ತಂದೆಯಾಗಿ ನನ್ನ ಹೃದಯ ಭಗ್ನಗೊಂಡಿದೆ. ತಂದೆಯಾಗಿ ನಾನು ಆತನಿಗೆ ಸರಿಯಾಗಿ ಬುದ್ಧಿ ಕಲಿಸಲಿಲ್ಲ. ನನ್ನದೇ ತಪ್ಪು ಇರಬಹುದು. ಮಗನ ಪರವಾಗಿ ನಾನು ಸಮಾಜದ ಕ್ಷಮೆ ಕೋರುತ್ತೇನೆ' ಎಂದು ಜಾಕಿ ಚಾನ್ ಬರೆದುಕೊಂಡಿದ್ದ.

ಹಾಗೆ ನೋಡಿದರೆ ಜಾಕಿ ಚಾನ್ ತನ್ನ ಮಗನಂತೆ ಚಿನ್ನದ ಚಮಚ ಬಾಯಲ್ಲಿ ಇಟ್ಟುಕೊಂಡು ಹುಟ್ಟಿದವನಲ್ಲ. ಹಾಂಕಾಂಗ್‌ನಲ್ಲಿ ಹುಟ್ಟಿದ ಆತನ ಬಾಲ್ಯದ ಹೆಸರು ಚಾನ್ ಕಾಂಗ್ ಸ್ಯಾಂಗ್. ತಂದೆ ಬಾಣಸಿಗ, ತಾಯಿ ಕೆಲಸದಾಳು. ಚಿಕ್ಕಂದಿನಲ್ಲೇ ವಿದ್ಯೆ ತಲೆಗೆ ಹತ್ತಲಿಲ್ಲ. ಸ್ಕೂಲು ಬಿಟ್ಟು ಚೀನಾ ಡ್ರಾಮಾ ಅಕಾಡೆಮಿ ಸೇರಿದ. ನಟನೆ, ಹಾಡು ಕಲಿತ. ಸಣ್ಣ, ಪುಟ್ಟ ಪಾತ್ರ ಮಾಡಿದ. ಬ್ರೂಸ್ ಲೀ ಉತ್ತುಂಗದ ಕಾಲದಲ್ಲಿ (ಆಗ ಜಾಕಿಗೆ 17ರ ಹರೆಯ) 'ಫಿಸ್ಟ್ ಆಫ್ ಫ್ಯೂರಿ' ಸಿನಿಮಾಕ್ಕೆ ಸ್ಟಂಟ್‌ಮ್ಯಾನ್ ಆಗಿ ಕೆಲಸ ಮಾಡಿದ್ದ ಜಾಕಿ! ಸಿನಿಮಾದಲ್ಲಿ ಅವಕಾಶ ಸಿಗದಾಗ, ಹಾಸ್ಯದ ನೆಪದಲ್ಲಿ ವಯಸ್ಕರ ಸಿನಿಮಾದಲ್ಲೂ ನಟಿಸಿದ್ದ. ಬಳಿಕ ತಂದೆಯ ಜತೆ ಆಸ್ಟ್ರೇಲಿಯಾದ ಕ್ಯಾನ್‌ಬೆರಾಕ್ಕೆ ವಲಸೆ ಹೋದ ಚಾನ್, ಅಲ್ಲಿ ಕಾಲೇಜಿಗೆ ಸೇರಿಕೊಂಡು ಜತೆಗೆ ಕಟ್ಟಡ ನಿರ್ಮಾಣ ಕೆಲಸದಲ್ಲಿ ಕಾರ್ಮಿಕನಾಗಿ ದುಡಿಯತೊಡಗಿದ. ಅಲ್ಲಿ ಬಿಲ್ಡರ್ ಆಗಿದ್ದ ಜಾಕ್ ಎಂಬಾತನ ಕೈಕೆಳಗೆ ಕೆಲಸ ಮಾಡುತ್ತಿದ್ದುದರಿಂದ ಈತನನ್ನು ಲಿಟ್ಲ್ ಜಾಕ್ ಎಂದು ಜನ ಕರೆಯತೊಡಗಿದರು. ಹಾಗೆಯೇ ಆತನಿಗೆ ಜಾಕೀ ಎನ್ನುವ ಹೆಸರು ಬಂತು! ಅಲ್ಲಿಂದ ಮತ್ತೆ ಹಾಂಕಾಂಗ್‌ಗೆ ಮರಳಿ ಚಿತ್ರರಂಗದಲ್ಲಿ ಹಲವು ವರ್ಷಗಳ ಕಾಲ ಸೈಕಲ್ ಹೊಡೆದಿದ್ದ. 1978ರಲ್ಲಿ 'ಸ್ನೇಕ್ ಇನ್ ದಿ ಈಗಲ್ಸ್ ಶ್ಯಾಡೊ' ಎನ್ನುವ ಸಿನಿಮಾ ಹಿಟ್ ಆಗುವವರೆಗೆ ಜಾಕಿ ಒಬ್ಬ ಸಾಮಾನ್ಯ ನಟನಾಗಿಯೇ ಉಳಿದಿದ್ದ.

ಈಗಂತೂ ಜಾಕಿ ಚಾನ್ ವಿಶ್ವಾದ್ಯಂತ ಹೆಸರುವಾಸಿ. ಚೀನಾ, ಅಮೆರಿಕ, ಆಸ್ಟ್ರೇಲಿಯಾ ಎನ್ನದೆ ಎಲ್ಲ ದೇಶಗಳಲ್ಲೂ ಅಭಿಮಾನಿಗಳಿದ್ದಾರೆ. ಜೆಸಿಇ ಮೂವೀಸ್ ಲಿಮಿಟೆಡ್, ಜೆಸಿ ಗ್ರೂಪ್ ಚೀನಾ, ಜಾಕಿ ಆ್ಯಂಡ್ ವಿಲ್ಲೀಸ್ ಪ್ರೊಡಕ್ಷನ್ಸ್ ಮುಂತಾಗಿ ಹಲವು ಕಂಪೆನಿಗಳ ಒಡೆತನ ಹೊಂದಿರುವ ಜಾಕಿಗೆ ಚೀನಾದಾದ್ಯಂತ ಥಿಯೇಟರ್‌ಗಳ ಸರಣಿಯೂ ಇದೆ. ಜಾಕಿ ಹೆಸರಿನ ಬಟ್ಟೆ ಬ್ರ್ಯಾಂಡ್ ಜನಪ್ರಿಯವಾಗಿದೆ. ಸ್ವಂತ ಹೆಸರಿನಲ್ಲಿ ಪ್ರತಿಷ್ಠಾನವನ್ನೂ ಮಾಡಿರುವ ಜಾಕಿ, ಲಕ್ಷಾಂತರ ಡಾಲರ್‌ಗಳನ್ನು ಪ್ರತಿವರ್ಷ ಮಕ್ಕಳ ಹೃದಯ ಚಿಕಿತ್ಸೆಗೆ, ಇಳಿವಯಸ್ಸಿನವರ ಜೀವನ ನಿರ್ವಹಣೆಗೆ ದಾನ ಮಾಡುತ್ತಿದ್ದಾನೆ. 'ಸತ್ತ ಬಳಿಕ ನನ್ನ ಅರ್ಧ ಆಸ್ತಿಯನ್ನು ದಾನ ಮಾಡಬೇಕು' ಎಂದೂ ಉಯಿಲು ಬರೆದಿಟ್ಟಿದ್ದಾನೆ. ಈಗ ಈ ಇಳಿವಯಸ್ಸಿನಲ್ಲಿ ಇದ್ದೊಬ್ಬ ಮಗನ ಚಿಂತೆ ಚಾನ್‌ನನ್ನು ಹಣ್ಣು ಮಾಡಿದೆ. (ವಿವಾಹೇತರ ಸಂಬಂಧದಿಂದ ಹುಟ್ಟಿದ ಇನ್ನೊಬ್ಬ ಮಗಳೂ ಜಾಕಿ ಚಾನ್‌ಗೆ ಇದ್ದಾಳೆ.) ಅಪ್ಪಂದಿರು ಅಪಾರ ಆಸ್ತಿ ಮಾಡಿಟ್ಟರೆ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ ಎನ್ನುತ್ತಾರೆ. ಆದರೆ ಅಪ್ಪ ಚಿಕ್ಕಂದಿನಿಂದ ಪಟ್ಟ ಕಷ್ಟವನ್ನು ನೋಡಿಯಾದರೂ ಈತನ ಮಗ ಬುದ್ಧಿವಂತನಾಗಿದ್ದರೆ..? ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65